ಕಾರ್ಯಗತಗೊಳಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದುದರಿಂದ, ಈ ಬಗ್ಗೆ ಕಾನೂನು ಇಲಾಖೆ ಅಭಿಪ್ರಾಯವನ್ನು ಪಡೆಯಲಾಯಿತು. ಕಾನೂನು ಇಲಾಖೆಯು ಗುತ್ತಿಗೆದಾರರಿಗೆ ಯಾವ ಉದ್ದೇಶಕ್ಕಾಗಿ ನಿವೇಶನವನ್ನು ನೀಡಲಾಗಿತ್ತೋ, ಆ ಉದ್ದೇಶಕ್ಕಾಗಿ ಅವರು ಆ ನಿವೇಶನವನ್ನು ಬಳಸದೆ ಇರುವುದರಿಂದ ಅವರ ಕರಾರನ್ನು ರದ್ದುಪಡಿಸಿ ನಂತರ ಅವರ ಮೇಲೆ ಸೂಕ್ತ ಮೊಕದ್ದಮೆ ನಡೆಸಬೇಕೆಂಬ ಅಭಿಪ್ರಾಯವನ್ನು ನೀಡಿರುತ್ತದೆ. ಅದರಂತೆ ಈ ಬಗ್ಗೆ ಲೋಕೋಪಯೋಗಿ ಇಲಾಖೆಯು ಈಗಾಗಲೇ ಕ್ರಮ ಕೈಗೊಂಡು ಮುಖ್ಯ ಅಭಿಯಂತರರು, (ಸಂಪರ್ಕ ಮತ್ತು ಕಟ್ಟಡ), ಧಾರವಾಡ ಇವರಿಗೆ ಈ ಗುತ್ತಿಗೆದಾರರೊಂದಿಗೆ ಆಗಿರುವ ಕರಾರನ್ನು ರದ್ದುಪಡಿಸಿ ಸೂಕ್ತ ನ್ಯಾಯಸ್ಥಾನದಲ್ಲಿ ಅವರ ಮೇಲೆ ಮೊಕದ್ದಮೆ ಹೂಡಲು ಕ್ರಮ ಕೈಗೊಳ್ಳುವಂತೆ ತಿಳಿಸಿದ್ದಾರೆ.

6. ಬೀಳಗಿ ತಾಲ್ಲೂಕಿನ ಕುಂದರಗಿ ಗ್ರಾಮದ ಜನತೆಗೆ ವಿದ್ಯುತ್ ಅಭಾವ

ಶ್ರೀ ಜಿ.ಜಿ. ಯಲ್ಲಿಗುತ್ತಿ (ಬೀಳಗಿ):– ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ ಕುಂದರಗಿ ಗ್ರಾಮದ ಜನತೆಗೆ ವಿದ್ಯುತ್ ಅಭಾವದಿಂದ ತುಂಬಾ ತೊಂದರೆಯಾಗಿದ್ದು, ಈ ಭಾಗದ ರೈತರು ಮತ್ತು ಸಾರ್ವಜನಿಕರಿಗೆ ದಿನನಿತ್ಯದ ಕೆಲಸ ಕಾರ್ಯಗಳಿಗೆ ತುಂಬಾ ಅನಾನುಕೂಲವಾಗಿದೆ. ಆದ್ದರಿಂದ, ಮೇಲ್ಕಂಡ ಕುಂದರಗಿ ಗ್ರಾಮದಲ್ಲಿ ಪ್ರಸ್ತುತ ವರ್ಷ 1993–94ನೇ ಸಾಲಿನಲ್ಲಿ 33 (11) ಕೆ.ವಿ.ವಿದ್ಯುತ್ ಸ್ಥಾವರವನ್ನು ಸ್ಥಾಪಿಸಿ, ಈ ಭಾಗದ ಜನತೆಗೆ ವಿದ್ಯುತ್ ಅಭಾವವನ್ನು ನಿವಾರಿಸಬೇಕೆಂದು ಮಾನ್ಯ ಉಪಮುಖ್ಯಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ:– (ಹಣಕಾಸು ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೇ, ಉಪಮುಖ್ಯಮಂತ್ರಿಗಳ ಪರವಾಗಿ ನಾನು ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

"ವಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ ಕುಂದರಗಿ ಗ್ರಾಮಕ್ಕೆ ಈಗ ಬೀಳಗಿಯಲ್ಲಿರುವ 33:11 ಕೆ.ವಿ. 2:5 ಎಂ.ವಿ.ಎ. ಸಾಮರ್ಥ್ಯದ ಉಪವಿದ್ಯುತ್ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದ್ದು, ಈ ಬೀಳಗಿ ಉಪವಿದ್ಯುತ್ ಕೇಂದ್ರವು ಪೂರ್ಣವಾಗಿ ಲೋಡ್ ಆಗಿರುತ್ತದೆ ಮತ್ತು ಕುಂದರಗಿ ಗ್ರಾಮಕ್ಕೆ ಸರಬರಾಜಾಗುತ್ತಿರುವ ವಿದ್ಯುತ್ ವೋಲ್ಟೇಜ್ ಸ್ವಲ್ಪ ಕಡಿಮೆಯಾಗಿರುವುದು ಕ.ವಿ. ಮಂಡಳಿಯ ಗಮನಕ್ಕೆ ಬಂದಿದೆ. ಈ ತೊಂದರೆಯನ್ನು ನಿವಾರಿಸಲು ಕ.ವಿ. ಮಂಡಳಿಯು ಬೀಳಗಿಯ ಉಪವಿದ್ಯುತ್ ಕೇಂದ್ರವನ್ನು 110 ಕೆ.ವಿ. ಉಪಕೇಂದ್ರವನ್ನಾಗಿ ಪರಿವರ್ತಿಸಲು ಹಾಗೂ ಕುಂದರಗಿಯಲ್ಲಿ 33:11 ಕೆ.ವಿ. 1:5 ಎಂ.ವಿ.ಎ. ಸಾಮರ್ಥ್ಯದ ಉಪವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಮಂಜೂರಾತಿ ನೀಡಿರುತ್ತದೆ. ಆದರೆ ಬೀಳಗಿಯ 110 ಕೆ.ವಿ. ಉಪವಿದ್ಯುತ್ ಕೇಂದ್ರದ ಕೆಲಸವನ್ನು ಮೊದಲು ಪ್ರಾರಂಭಿಸಿ, ನಂತರ ಕುಂದರಗಿ ಉಪವಿದ್ಯುತ್ ಕೇಂದ್ರದ ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿರುತ್ತದೆ. ಈ ಕೆಲಸಗಳನ್ನು 1993–94ನೇ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ."

7 ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕ ಕಾರಣ ಪ್ರವಾಸಿಗಳಿಗೆ ವ್ಯವಸ್ಥೆ

ಶ್ರೀ ಜಿ. ಪುಟ್ಟಸ್ವಾಮಿಗೌಡ:– ಸನ್ಮಾನ್ಯ ಅಧ್ಯಕ್ಷರೇ, 1993ನೇ ವರ್ಷದ ಕೊನೆಯಲ್ಲಿ ಶ್ರವಣಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕ ನಡೆಯಲಿದೆ. ಈ ಕಾರಣ ಪ್ರವಾಸಿಗಳ ಅನುಕೂಲತೆಗಾಗಿ ಹಲವಾರು ಅಭಿವೃದ್ಧಿಗಳನ್ನು ಶ್ರೀ ಕ್ಷೇತ್ರದಲ್ಲಿ ಸರಕಾರದವರು ಹಮ್ಮಿಕೊಂಡಿರುತ್ತಾರೆ. ಇವುಗಳಲ್ಲಿ ಬಹಳ ಪ್ರಾಮುಖ್ಯವಾದ ಅಭಿವೃದ್ಧಿ ಕಾರ್ಯಕ್ರಮಗಳು ಎಂದರೆ ವಿವಿಧ ಕಡೆಗಳಿಂದ ಬರುವ ಪ್ರವಾಸಿಗಳು ಸುಖಕರವಾಗಿ, ಸುಗಮವಾಗಿ, ಸರಿಯಾಗಿ ಕ್ಷೇತ್ರಕ್ಕೆ ಬರಬೇಕು ಎಂಬುದು. ಆ ದೃಷ್ಟಿಯಿಂದ ನಾನು ಕೃಷ್ಣರಾಜಪೇಟೆಯಿಂದ ಕುಂದೂರು ಧಮಲಂಗಲ ಮಾರ್ಗವಾಗಿ ಶ್ರವಣಬೆಳಗೊಳಕ್ಕೆ ಹೋಗುವ ನೇರ ರಸ್ತೆಯನ್ನು ಡಾಂಬರೀಕರಣ ಮಾಡಬೇಕೆಂದು

ಮಹಾಮಸ್ತಕಾಭಿಷೇಕ ಸಮಿತಿಗೆ ಮೇಲಿಂದ ಮೇಲೆ ಮನವಿ ಮಾಡಿಕೊಂಡರೂ ಪ್ರಯೋಜನವಾಗಿರುವುದಿಲ್ಲ. ಮಹಾ ಮಸ್ತಕಾಭಿಷೇಕ ಸಂದರ್ಭ ಕಾಲದಲ್ಲಿಯೂ ಅಲ್ಲದೆ ವರ್ಷದ ಎಲ್ಲಾ ಕಾಲದಲ್ಲಿಯೂ ಸಹಾ ಪ್ರವಾಸಿಗಳು ಹಳೆಬೀಡು, ಬೇಲೂರು, ಶ್ರವಣಬೆಳಗೊಳ ನೋಡಿಕೊಂಡು ಶ್ರೀರಂಗಪಟ್ಟಣ, ಚನ್ನರಾಯಪಟ್ಟಣ ಮಾರ್ಗವಾಗಿ ಪ್ರೇಕ್ಷಣೀಯ ಸ್ಥಳ ನೋಡಲು ಪ್ರವಾಸ ಮಾಡುತ್ತಾರೆ. ಇಂತಹ ಪ್ರವಾಸಿಗಳು ಮೈಸೂರಿನಿಂದ ಹೊರಟು ಎಸ್.ಜಿ. ರಸ್ತೆ ಮಾರ್ಗವಾಗಿ ಪ್ರಯಾಣ ಮಾಡುವಾಗ ಮಧ್ಯೆ ಕೃಷ್ಣರಾಜಪೇಟೆ ಸಿಗುತ್ತದೆ. ಇಲ್ಲಿ ನಿಂತು ಶ್ರವಣಬೆಳಗೊಳಕ್ಕೆ ದಾರಿ ಯಾವುದೆಂದು ಯಾರನ್ನಾದರೂ ಕೇಳಿದರೆ ಅವರು ಕೃಷ್ಣರಾಜಪೇಟೆ, ಕುಂದೂರು-ಧಮಲಂಗಲ ರಸ್ತೆಯನ್ನೇ ತೋರಿಸುತ್ತಾರೆ. ಪ್ರವಾಸಿಗಳು ಈ ಮಾರ್ಗವಾಗಿ ಪ್ರಯಾಣ ಮಾಡಿ ತುಂಬಾ ತೊಂದರೆಯನ್ನು ಅನುಭವಿಸುತ್ತಾರೆ.

ಪ್ರವಾಸಿಗರಿಗೆ ನೇರ ರಸ್ತೆಯಾಗಿರುವುದೇ ಅಲ್ಲದೇ ಕೃಷ್ಣರಾಜಪೇಟೆ ಚನ್ನರಾಯಪಟ್ಟಣದ ಎರಡು ತಾಲ್ಲೂಕುಗಳ ಹಲವಾರು ಗ್ರಾಮಗಳು ಈ ರಸ್ತೆಯ ಪ್ರಯೋಜನವನ್ನು ಹೊಂದಿರುತ್ತವೆ. ಈ ಕಾರಣದಿಂದ ಇದರ ಡಾಂಬರೀಕರಣ ಅಗತ್ಯವಾಗಿರುತ್ತದೆ.

ವಿಶೇಷ ಸಂದರ್ಭದಲ್ಲಿ ರಸ್ತೆ ಸಂಪರ್ಕವನ್ನು ಉತ್ತಮಪಡಿಸಿಕೊಡಬೇಕೆಂದು ಸರ್ಕಾರ ನಿರ್ಧಾರ ತೆಗೆದುಕೊಂಡಾಗ ಪ್ರಭಾವೀ ರಾಜಕಾರಣಿಗಳ ಒತ್ತಡಕ್ಕೆ ಸಿಲುಕಿ ಸರಕಾರದ ಉದ್ದೇಶ ಸಾರ್ಥಕವಾಗುತ್ತಿಲ್ಲ. ಹೀಗಾಗದಂತೆ ಎಚ್ಚರಿಕೆವಹಿಸಿ ಯಾವ ಯಾವ ರಸ್ತೆಗಳು ತೀರ ಅನಿವಾರ್ಯವಾಗಿರುತ್ತವೆಂಬುದನ್ನು ತಜ್ಞರಿಂದ ಸಲಹೆ ಪಡೆದು ಅವುಗಳನ್ನೇ ಉತ್ತಮಪಡಿಸುವ ವ್ಯವಸ್ಥೆಯಾಗಬೇಕಾಗಿರುತ್ತದೆ.

ಈ ಎಲ್ಲಾ ಕಾರಣಗಳಿಂದ ನಮ್ಮ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಈ ಕಡೆ ಗಮನಹರಿಸಿ ಅತೀ ಜರೂರಾಗಿರುವ ಕೃಷ್ಣರಾಜಪೇಟೆ – ಕುಂದೂರು-ಧಮಲಂಗಲ, ಶ್ರವಣ ಬೆಳಗೊಳ ರಸ್ತೆಯನ್ನು ಮಹಾಮಸ್ತಕಾಭಿಷೇಕ ವೇಳೆಗೆ ಪೂರ್ಣ ಡಾಂಬರೀಕರಣ ಮಾಡಿಸಿ ಪ್ರವಾಸಿಗಳಿಗೆ ಉತ್ತಮ ರಸ್ತೆ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಈ ಸದನದ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ಎ. ಚೆನ್ನಪ್ಪ (ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು) ಲೋಕೋಪಯೋಗಿ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

"ಶ್ರವಣಬೆಳಗೊಳದಲ್ಲಿ 1993-94ರ ಅವಧಿಯಲ್ಲಿ ಮಹಾಮಸ್ತಕಾಭಿಷೇಕ ನಡೆಯಲಿದೆ. ಈ ಸಂದರ್ಭದಲ್ಲಿ ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿರುವ ಕೆಲವು ರಸ್ತೆಗಳ ಅಭಿವೃದ್ಧಿಯನ್ನು ತೆಗೆದುಕೊಳ್ಳುವುದಕ್ಕೆ, ಮಹಾಮಸ್ತಕಾಭಿಷೇಕ ಸಮಿತಿಯವರು ಅನುಮೋದಿಸಿ 155.00 ಲಕ್ಷ ರೂ.ಗಳ ಅನುದಾನವನ್ನು ಜೂನ್ 1993ರಲ್ಲಿ ಬಿಡುಗಡೆ ಮಾಡಿದ್ದಾರೆ.

ಮಾನ್ಯ ಸದಸ್ಯರು ಸೂಚಿಸಿರುವ ಕೃಷ್ಣರಾಜಪೇಟೆಯಿಂದ ಕುಂದೂರು – ಧಮಲಂಗಲ – ಶ್ರವಣಬೆಳಗೊಳ ರಸ್ತೆಯ ಡಾಂಬರೀಕರಣವನ್ನು ಪ್ರಸ್ತಾಪದಲ್ಲಿ ಸೇರಿಸಿರುವುದಿಲ್ಲ. ಆದಾಗ್ಯೂ ಈ ರಸ್ತೆಯ ಪ್ರಾಮುಖ್ಯತೆಯನ್ನು ಪರಿಶೀಲಿಸಿ ಅತಿ ಅಗತ್ಯವಾದ ಭಾಗಗಳಲ್ಲಿ ಡಾಂಬರೀಕರಣ ಮಾಡುವ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು."

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೇ, ಈ 68ನೇ ನಿಯಮದ ಪ್ರಕಾರ ಏನು ರೈತರ ಮೇಲೆ ಸಹಕಾರ ಸಂಘದ ಬಡ್ಡಿ ಮತ್ತು ಸುಸ್ತಿ ಬಡ್ಡಿ ಬಗ್ಗೆ ನಾವು ಕಳುಹಿಸಿರುವ ನೋಟೀಸ್‌ಗೆ

ಅವಕಾಶ ಮಾಡಿಕೊಟ್ಟಿದ್ದೀರಿ, ದಯವಿಟ್ಟು ಒಂದು ಸಮಯ ನಿಗದಿ ಮಾಡಿ, ಏಕೆಂದರೆ ನಿನ್ನೆ ಕೂಡ ಕಳುಹಿಸಿದ್ದೇವೆ. ಅದರ ಮಹತ್ವ ಹೊರಟುಹೋಗುತ್ತಿದೆ.

ಅಧ್ಯಕ್ಷರು:– 3 ಗಂಟೆಗೆ ಬಿಸಿನೆಸ್ ಅಡ್ವೈಸರಿ ಕಮಿಟಿ ಕರೆದಿದ್ದೇನೆ. ಅಲ್ಲಿ ಡಿಸ್‌ಕಸ್ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇಷ್ಟೊಂದು ಮಹತ್ವವಾದ ವಿಷಯವಾದ ಬಗ್ಗೆ ಒಂದು ರೆಕಗ್‌ನೈಸ್ಡ್ ಪೊಲಿಟಿಕಲ್ ಪಾರ್ಟಿಯಾಗಿ ನನ್ನ ಹೆಸರು ಇದ್ದರೆ, ನಾನು ಸಹಿ ಮಾಡಿ ಕಳುಹಿಸಿದ್ದರೆ. ಆ ನೋಟೀಸ್‌ನಲ್ಲಿ ಹೆಸರನ್ನು ಸೇರಿಸುವುದಿಲ್ಲ. ವಾಟಾಳ್ ನಾಗರಾಜ್ ಸಹಿ ಮಾಡಿದ್ದಾರೆ. ಒಂದು ಪ್ರಮುಖ ಪಕ್ಷದವರು ಅದಕ್ಕೆ ಸಹಿ ಮಾಡಿದ್ದರೂ ಅವರ ಹೆಸರು ಬಂದಿಲ್ಲ. ಈ ಬಗ್ಗೆ ತಮಗೆ ಪತ್ರ ಬರೆದಿದ್ದೆ. ಅಧ್ಯಕ್ಷರೇ ಬಹಳ ನೊಂದು ಈ ಮಾತು ಹೇಳುತ್ತಿದ್ದೇನೆ. ಅನೇಕ ಬಾರಿ ಇದು ಆಗಿತ್ತು. ಇಲ್ಲಿ ಸದನದಲ್ಲಿ ಪ್ರಸ್ತಾಪ ಮಾಡಬಾರದು ಎಂದು ಇದ್ದೆ. ಏಕೆಂದರೆ ಇವತ್ತಾದರೂ ನೋಟೀಸ್‌ನಲ್ಲಿ ಹೆಸರು ಸೇರಿಸುತ್ತಾರೆಂದು ನಾನು ತಿಳಿದುಕೊಂಡಿದ್ದೆ.

ಪುತ್ತೂರು ತಾಲ್ಲೂಕು ಸಬ್ ಡಿವಿಜನ್ ಕೇಂದ್ರ ಸ್ಥಳದಲ್ಲಿ ಕ್ರೀಡಾಂಗಣ

ಶ್ರೀ ವಿನಯಕುಮಾರ್ ಸೊರಕೆ:– ಮಾನ್ಯ ಅಧ್ಯಕ್ಷರೆ, ಪುತ್ತೂರು ತಾಲ್ಲೂಕು ಸಬ್ ಡಿವಿಜನ್ ಕೇಂದ್ರ ಸ್ಥಳವಾಗಿದ್ದು ಇಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಂಗಣವಾಗಬೇಕಾಗಿ ಹಲವಾರು ವರ್ಷದಿಂದ ಇರುವ ಬೇಡಿಕೆ. ಪುತ್ತೂರು ತಾಲ್ಲೂಕು ಪರಿಸರದಿಂದ ಹಲವಾರು ರಾಜ್ಯ ಮಟ್ಟದ, ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಳುಗಳು ಸೃಷ್ಟಿಯಾಗಿದ್ದು, ಸಮರ್ಪಕವಾದ ಕ್ರೀಡಾಂಗಣ ಇಲ್ಲದೇ ಇರುವುದು ಕೊರತೆಯಾಗಿದೆ. ಈ ತಾಲ್ಲೂಕುಮಟ್ಟದ ಕ್ರೀಡಾಂಗಣಕ್ಕೆ ಈಗಾಗಲೇ ಜಿಲ್ಲಾಪರಿಷತ್‌ನಲ್ಲಿ ಮಂಜೂರು ಕೆಲಸ ನಡೆದಿದ್ದು ಕೂಡಲೇ ಕೆಲಸ ಪ್ರಾರಂಭಿಸಲು ಯುವಜನ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):– ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರ ಪರವಾಗಿ, ಮಾನ್ಯ ಅಧ್ಯಕ್ಷರೇ,

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ಕೇಂದ್ರದಲ್ಲಿ 1992–93ನೇ ಸಾಲಿನಲ್ಲಿ ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಿಸಲು ಉದ್ದೇಶಿಸಲಾಗಿದೆ. ಜಿಲ್ಲಾಪರಿಷತ್ತಿನ ಅಧೀನದಲ್ಲಿರುವ ಕೆಳಕಾಣಿಸಿದ ನಿವೇಶನವನ್ನು ಕ್ರೀಡಾಂಗಣಕ್ಕಾಗಿ ಕಾದಿರಿಸಲಾಗಿದೆ.

1) ಸರ್ವೆ ನಂ. 86:1ಎ	–	1–74 ಎಕರೆ
2) ಸರ್ವೆ ನಂ. 87:1	–	0–92 ಎಕರೆ
3) ಸರ್ವೆ ನಂ. 87:2	–	3–18 ಎಕರೆ
4) ಸರ್ವೆ ನಂ. 87:2ಇ 2	–	0–42 ಎಕರೆ
		6–26 ಎಕರೆ

ಈ ನಿವೇಶನದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕಾಗಿ ಜಿಲ್ಲಾಪರಿಷತ್ತಿನ ಇಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಅವರ ರೂ. 26–00 ಲಕ್ಷಕ್ಕೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿರುತ್ತಾರೆ.

ಈ ಕ್ರೀಡಾಂಗಣ ನಿರ್ಮಾಣಕ್ಕಾಗಿ ದಕ್ಷಿಣ ಕನ್ನಡ ಜಿಲ್ಲಾಪರಿಷತ್ತಿನ ಮೂಲಕ ಗರಿಷ್ಠ ರೂ. 10.00